## ಪರ್ಯಾಯ ಶೈಕ್ಷಣಿಕ ಯೋಜನೆ: 2021–22

**ತರಗತಿ: 9ನೇ.** **ತಿಂಗಳು : ಫೆಬ್ರವರಿ** **ವಿಷಯ:– ದ್ವಿತೀಯ ಭಾಷೆ ಕನ್ನಡ**

| ಕ್ರ.ಸಂ. | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಫೆಬ್ರವರಿ ಮೊದಲನೆಯ ವಾರ | **ಗದ್ಯ: ಐನ್‌ಸ್ಟೀನ್ ಮತ್ತು ದೇವರು.**<br>• ನೀಡಲಾದ ಪದಗಳನ್ನು ಬಳಕೆ ಮಾಡಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ರಚಿಸುವುದು. | • ಕೃತಿಕಾರರಾದ ಡಾ.ಎಚ್.ನರಸಿಂಹಯ್ಯ ಅವರ ಕಾಲ, ಸ್ಥಳ, ಕೃತಿಗಳಿಗೆ ಸಂಬಂಧಿಸಿದ ಪದಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ವಾಕ್ಯರೂಪದಲ್ಲಿ ಲೇಖಕರ ಪರಿಚಯ ಮಾಡಿಕೊಡುವ (ಲಿಖಿತ ಮತ್ತು ಮೌಖಿಕ) ಚಟುವಟಿಕೆ ಮಾಡಿಸುವುದು. | • ಡಾ.ಎಚ್.ನರಸಿಂಹಯ್ಯ ಅವರನ್ನು ವಾಕ್ಯ ರೂಪದಲ್ಲಿ ಪರಿಚಯಿಸಿ. |
| | | • ಅಧ್ಯಾಪಕರ ಮಾದರಿ ಓದನ್ನು ಅನುಸರಿಸಿ ಗದ್ಯಭಾಗವನ್ನು ಓದುವರು. ಮತ್ತು ತಮ್ಮದೇ ಮಾತುಗಳಲ್ಲಿ ಗದ್ಯವನ್ನು ವಿವರಿಸುವರು. | • ಅಧ್ಯಾಪಕರು ಗದ್ಯಭಾಗವನ್ನು ಸೂಕ್ತ ಲೇಖನ ಚಿನ್ಹೆಗಳನ್ನು ಅನುಸರಿಸಿ, ಸ್ವರ ಭಾರಗಳೊಂದಿಗೆ ವಾಚನ ಮಾಡುವರು. ವಿದ್ಯಾರ್ಥಿಗಳು ಅನುಸರಿಸುವರು. ಶ್ರೇಷ್ಠ ವಿಜ್ಞಾನಿಯೂ, ಮಾನವತಾವಾದಿಯೂ ಆದ ಆಲ್ಬರ್ಟ್ ಐನ್ ಸ್ಟೀನ್‌ರವರ ನಂಬಿಕೆಯ ದೇವರು ಮತ್ತು ಅವರು ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಬಗೆಯನ್ನು ವಿವರಿಸುವ ಗುಂಪು ಚಟುವಟಿಕೆ ಮಾಡಿಸುವುದು. ಮತ್ತು ಮಂಡನೆಗೆ ಅವಕಾಶ ನೀಡುವುದು. | |
| | | • ದೇವರುಮತ್ತು ಧರ್ಮದ ಬಗ್ಗೆ ಐನ್‌ಸ್ಟೀನ್‌ರವರ ನಂಬಿಕೆಗಳಿಂದ ಗೋಚರವಾಗುವ ವಿಚಾರಗಳನ್ನು | • **ಧರ್ಮವಿಲ್ಲದ ವಿಜ್ಞಾನ ಕುಂಟು, ವಿಜ್ಞಾನವಿಲ್ಲದ ಧರ್ಮ ಕುರುಡು. ಎಂಬ ವಿಚಾರದೊಂದಿಗೆ** ಐನ್ ಸ್ಟೀನ್‌ರ ಪ್ರಕಾರದ ಧರ್ಮದ ಪರಿಕಲ್ಪನೆಗಳನ್ನು ಗುಂಪಿನಲ್ಲಿ ಚರ್ಚಿಸಿ ವಿಚಾರ ಮಂಡನೆಗೆ ಅವಕಾಶ ಕಲ್ಪಿಸುವುದು. | • **ಧರ್ಮವನ್ನು ಕುರಿತಂತೆ** ಐನ್ ಸ್ಟೀನ್‌ರವರ ವಿಚಾರಗಳನ್ನು ಸ್ಪಷ್ಟಪಡಿಸಿ. |

| | | | | |
|---|---|---|---|---|
| | | ಅರ್ಥೈಸಿಕೊಳ್ಳುವರು. | | |
| | | • ಐನ್ ಸ್ಟೀನ್‌ರವರ ಬದುಕು ರೂಪಿಸಿದ ಹೇಳಿಕೆಗಳನ್ನು ಅರ್ಥೈಸಿಕೊಳ್ಳುವರು. | • ಐನ್ ಸ್ಟೀನ್‌ರವರ ಬದುಕು ರೂಪಿಸಿದ ಹೇಳಿಕೆಗಳ ಮೇಲೆ ಗುಂಪು ಚರ್ಚೆ ಏರ್ಪಡಿಸಿ ತಮ್ಮ ವಿಚಾರಗಳನ್ನು ಮಂಡನೆಯ ಚಟುವಟಿಕೆ ಮಾಡಿಸುವುದು. | **ಮೌಲ್ಯಮಾಪನ ಹಾಳೆ–01** |
| **02** | **2ನೇ ವಾರ** | • ಭಾಷಾಭ್ಯಾಸ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವರು. | • ಮಾದರಿಯಲ್ಲಿ ವಿವರಿಸಿರುವಂತೆ ಪದಗಳನ್ನು ಬಿಡಿಸಿ ಸಂಧಿ ಹೆಸರನ್ನು ಬರೆಸುವ, ನೀಡಿದ ಪದಗಳನ್ನು ತಮ್ಮ ಸ್ವಂತ ವಾಕ್ಯಗಳಲ್ಲಿ ಬಳಸುವ, ಮಾದರಿಯಂತೆ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಅವುಗಳನ್ನು ಹೆಸರಿಸುವ ಚಟುವಟಿಕೆ ಮಾಡಿಸುವುದು.<br><br>**(ಅಭ್ಯಾಸದ ಹಾಳೆ – 01)** | |
| | | • ಸೈದ್ಧಾಂತಿಕ ವ್ಯಾಕರಣ–ದ್ವಿರುಕ್ತಿ, ಜೋಡುನುಡಿ, ಮತ್ತು ಅವ್ಯಯಗಳನ್ನು ಕಲಿಯುವರು. | • ಪದಗಳ ಗುಂಪನ್ನು ನೀಡಿ ದಿರುಕ್ತಿ ಮತ್ತು ಜೋಡು ನುಡಿಗಳನ್ನು ಪಟ್ಟಿ ಮಾಡಿಸುವುದು.<br>• ಅವ್ಯಯಗಳ ವಿಧಗಳನ್ನು ವಿವರಿಸುವುದು. ಅವುಗಳಿಗೆ ಉದಾಹರಣೆಗಳನ್ನು ಪಟ್ಟಿಮಾಡಿಸುವುದು.<br><br>**(ಅಭ್ಯಾಸದ ಹಾಳೆ – 02)** | |
| **03** | ಫೆಬ್ರವರಿ ಮೂರನೇ ವಾರ | **ವಚನಗಳು**<br>• ವಚನಸಾಹಿತ್ಯ ಎಂದರೇನು ತಿಳಿಯುವರು<br><br>• ವಚನಗಳ ಆಶಯಗಳನ್ನು ತಿಳಿಯುವರು. | • ವಿದ್ಯಾರ್ಥಿಗಳಿಗೆ ತಿಳಿದಿರುವ ಶಿವಶರಣರ, ಶಿವಶರಣೆಯರ ವಚನಗಳನ್ನು ಹೇಳಿಸಿ ಹಾಡಿಸುವುದು.<br>• ಶರಣರ ಮಾತಿನ ಮಹತ್ವ ದೈವದ ಅದ್ಭುತ ಶಕ್ತಿ, ಢಾಂಬಿಕ ಭಕ್ತರ ಬಗ್ಗೆ ವಹಿಸಬೇಕಾದ ಎಚ್ಚರಿಕೆ ಕುರಿತು ಚರ್ಚಿಸುವರು. | • ವಚನ ಸಾಹಿತ್ಯ ಎಂದರೇನು ?<br>ವಚನಗಳು ಬಿಂಬಿಸುವ ಆಶಯಗಳನ್ನು ಬರೆಯಿರಿ<br><br>ಅಭ್ಯಾಸದ ಹಾಳೆ–3 |

| | | | | |
|---|---|---|---|---|
| | | • ಆಲಿಸಿ ಹಾಡುವರು( ಅಭಿವ್ಯಕ್ತಿಸುವರು)<br><br>• ವಚನದ ಭಾವಾರ್ಥದ ಜೊತೆ ಹೊಸ ಪದದ ಅರ್ಥ ತಿಳಿದುಕೊಳ್ಳುವರು.<br><br>• ವ್ಯಾಕಣಾಂಶಗಳನ್ನು ಅರಿಯುವರು. | • ಜೇಡರ ದಾಸಿಮಯ್ಯರವರ ವಚನವನ್ನು ರಾಗಬದ್ಧವಾಗಿ ಹಾಡಿಸುವುದು .<br><br>• ಪ್ರಶ್ನೋತ್ತರ ಚಟುವಟಿಕೆಯ ಮೂಲಕ ವಚನದ ಭಾವಾರ್ಥ ಹೇಳಿಸುವುದು .<br><br>• ವಾಕ್ಯರಚನೆ ಮಾಡಿಸುವುದರ ಮೂಲಕ ಪದಗಳನ್ನು ಅರ್ಥೈಸುವುದು.<br>• ಎರಡು ಗುಂಪು ಮಾಡಿ ವಿರುದ್ಧ ಪದ ಹೇಳಿಸುವುದು.<br>• ಮಾದರಿಯೊಂದನ್ನು ನೀಡಿ ಬಿಡಿಸಿ ಬರೆಯಲು ತಿಳಿಸುವುದು.<br>• ಗುಂಪಿಗೆ ಸೇರದ ಪದಗಳು ಬರೆದಿರುವ ಹಾಳೆಯನ್ನು ನೀಡಿ ಗುರ್ತಿಸಲು ಸೂಚಿಸುವುದು.<br>• ತತ್ಸಮ ತದ್ಬವ ಪದಗಳನ್ನು ಗುಂಪುಗಳ ಮೂಲಕ ಹೇಳಿಸುವುದು. | ಅಭ್ಯಾಸದ ಹಾಳೆ–4 |
| **04** | ಫೆಬ್ರವರಿ 4ನೇ ವಾರ | **ಪದ್ಯ : ಆಚಾರವಿಲ್ಲದ ನಾಲಗೆ**<br>• ದಾಸ ಸಾಹಿತ್ಯದ ಪರಿಚಯ ಮಾಡಿಕೊಳ್ಳುವರು.<br>• ದಾಸರು ರಚಿಸಿರುವ | • ವಿದ್ಯಾರ್ಥಿಗಳಿಗೆ ತಿಳಿದಿರುವ ಕೀರ್ತನೆಗಳನ್ನು ಹಾಡಲು ಅವಕಾಶ ಕಲ್ಪಿಸುವುದು.<br>• 16ನೇ ಶತಮಾನದಲ್ಲಿ ವಿಶಿಷ್ಟ ಸ್ಥಾನ ಪಡೆದ ದಾಸ ಸಾಹಿತ್ಯ ಹಾಗೂ ದಾಸ ಸಾಹಿತ್ಯದ ರಚನೆಕಾರರನ್ನು | |

| | | | | |
|---|---|---|---|---|
| | | ಕೀರ್ತನೆಗಳನ್ನು ನೆನಪಿಸಿಕೊಳ್ಳುವರು. ಮತ್ತು ದಾಸ ಸಾಹಿತ್ಯದ ಪ್ರಮುಖ ದಾಸರುಗಳ ಹೆಸರುಗಳನ್ನು ತಿಳಿಯುವರು.<br>• ವಚನ ಸಾಹಿತ್ಯ, ಜನಪದ ಸಾಹಿತ್ಯ, ದಾಸ ಸಾಹಿತ್ಯದ ಬಗ್ಗೆ ಅರ್ಥೈಸಿಕೊಳ್ಳುವರು.<br>• ಕೀರ್ತನೆಗಳಲ್ಲಿ ಅಡಕವಾಗಿರುವ ನೈತಿಕ ವಿಚಾರ, ಮಾನವೀಯ ಮೌಲ್ಯಗಳನ್ನು ತಿಳಿದುಕೊಳ್ಳುವರು.<br>• ಭಾಷಾಭ್ಯಾಸ ಚಟುವಟಿಕೆಗಳನ್ನು ಅರ್ಥೈಸಿಕೊಳ್ಳುವರು. | ಪರಿಚಯಿಸುವುದು.<br>• ಪುರಂದರದಾಸರ ಪರಿಚಯವನ್ನು ಮಾಡಿಕೊಂಡು, ಆಚಾರವಿಲ್ಲದ ನಾಲಗೆ ಪದ್ಯವನ್ನು ರಾಗಬದ್ಧವಾಗಿ ಹಾಡಿಸಿ, ಪದ್ಯದ ಭಾವಾರ್ಥವನ್ನು ಚರ್ಚಿಸುವುದು.<br>• ತಾವು ಅರ್ಥೈಸಿಕೊಂಡ ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದು.<br>• ಕೆಲವು ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಸೂಚಿಸಲು ಹೇಳುವುದು.<br>• ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಅವುಗಳ ಹೆಸರುಗಳನ್ನು ಅಭ್ಯಾಸ ಮಾಡಿಸುವುದು.<br>• ತತ್ಸಮ–ತತ್ಭವ ಪದಗಳನ್ನು ಬರೆಸುವುದು | ಪುರಂದರ ದಾಸರು ಮಾನವನ ನಡೆನುಡಿಯ ಮಹತ್ವವನ್ನು ಹೇಗೆ ವರ್ಣಿಸಿದ್ದಾರೆ?<br><br>ಅಭ್ಯಾಸದ ಹಾಳೆ– 05<br><br>ಅಭ್ಯಾಸದ ಹಾಳೆ – 06 |

**ಪರ್ಯಾಯ ಶೈಕ್ಷಣಿಕ ಯೋಜನೆ: 2021–22**

**ತರಗತಿ: 9ನೇ.** **ತಿಂಗಳು : ಫೆಬ್ರವರಿ** **ವಿಷಯ:–ದ್ವಿತೀಯ ಭಾಷೆ ಕನ್ನಡ**

---

**ಮೌಲ್ಯಮಾಪನ ಹಾಳೆ – 01**

➢ **ಕೃತಿಕಾರರಾದ ಡಾ. ಎಚ್.ನರಸಿಂಹಯ್ಯ ಅವರಿಗೆ ಸಂಬಂಧಿಸಿದಂತೆ ನೀಡಿರುವ ಪದಗಳನ್ನು ಬಳಸಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.**

(ಬೆಂಗಳೂರು ವಿಶ್ವವಿದ್ಯಾಲಯ, ನ್ಯಾಷನಲ್ ಕಾಲೇಜು, ಹೋರಾಟದ ಹಾದಿ, ಗೌರವ ಡಾಕ್ಟರೇಟ್, ಚಿಕ್ಕ ಬಳ್ಳಾಪುರ, ಪದ್ಮಭೂಷಣ, ಹೊಸೂರು, 1920, ಗೌರಿಬಿದನೂರು)

ಶ್ರೀಯುತರಾದ ________________________ ರವರು ___________ ಜಿಲ್ಲೆಯ _________ ತಾಲ್ಲೂಕಿನ ____________ ಗ್ರಾಮದಲ್ಲಿ ________ ರಲ್ಲಿ ಜನಿಸಿದರು.

ಇವರು ಬೆಂಗಳೂರಿನ ಬಸವನಗುಡಿಯ ________________ ನಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಸೇವೆ ಸಲ್ಲಿಸಿದ್ದಾರೆ. ಇವರು __________ ದ ಉಪಕುಲಪತಿಗಳೂ ಆಗಿದ್ದರು.

ಇವರಿಗೆ ಗುಲ್ಬರ್ಗ ವಿಶ್ವವಿದ್ಯಾಲಯದ _______________, ಭಾರತ ಸರ್ಕಾರದ ______________ ಪುರಸ್ಕಾರಗಳು ಲಭಿಸಿವೆ. _____________ ಎಂಬುದು ಇವರ ಆತ್ಮಕಥೆಯಾಗಿದೆ.

➢ ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1.ಧಾರ್ಮಿಕ ವ್ಯಕ್ತಿಗಳು ಐನ್‌ಸ್ಟೀನ್ ಅವರನ್ನು ಏನೆಂದು ಪರಿಭಾವಿಸುತ್ತಾರೆ?

2.ಧರ್ಮ ಮತ್ತು ವಿಜ್ಞಾನದ ಬಗ್ಗೆ ಐನ್‌ಸ್ಟೀನ್ ನೀಡಿರುವ ಪ್ರಸಿದ್ಧ ಹೇಳಿಕೆ ಯಾವುದು?

3. ಐನ್‌ಸ್ಟೀನ್ ಅವರು ದೇವರಿಗೆ ಸಂಬಂಧಿಸಿದಂತೆ ಯಾರ ವಿಚಾರಗಳನ್ನು ನಂಬಿದ್ದರು?

4.ಸ್ಪಿನೋಜಾ ಯಾರು? ಅವರು ಹಿಂಸೆಗೊಳಗಾದದ್ದು ಏಕೆ?

5.ಲೇಖಕರ ಪ್ರಕಾರ ಯಾವುದು ಅನ್ಯಾಯವಾಗುತ್ತದೆ?

6. ಐನ್‌ಸ್ಟೀನ್ ಅವರ ಹೆಸರೆತ್ತುವ ಅಧಿಕಾರ ಯಾರಿಗೆ ಇಲ್ಲವೆಂದು ಲೇಖಕರು ಹೇಳುತ್ತಾರೆ?

➢ ಈ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1.ದೇವರು ಮತ್ತು ಧರ್ಮದ ಬಗ್ಗೆ ಐನ್‌ಸ್ಟೀನ್ ರವರ ನಂಬಿಕೆಗಳೇನು?

2.ಮನುಷ್ಯನ ಯಾವ ಆದರ್ಶಗಳು ಐನ್‌ಸ್ಟೀನ್ ಅವರಿಗೆ ತುಚ್ಛ ಎನಿಸಿದವು?

## ಅಭ್ಯಾಸದ ಹಾಳೆ – 01

➢ **ನೀಡಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

ಮಾದರಿ:– ಏಕಾಭಿಪ್ರಾಯ = ಏಕ + ಅಭಿಪ್ರಾಯ – (ಸವರ್ಣದೀರ್ಘಸಂಧಿ.)

ಶತಮಾನೋತ್ಸವ = ______ + _______ –( ____________)

ಮಾತ್ರವಲ್ಲ = ___________ + _______ – (___________)

ವಾಗ್ವಾದ = __________ + _________ – (___________)

ಮನೆಯನ್ನು = ________ + _________ – (___________)

ದೇವರಲ್ಲಿ = ________ + _________ – (___________)

➢ **ನೀಡಿರುವ ಪದಗಳನ್ನು ಮಾದರಿಯಂತೆ ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ.**

ಮಾದರಿ:– ಸಮನ್ವಯ –ನಾವು ಪರಸ್ಪರ ಸಮನ್ವಯದಿಂದ ಬಾಳಬೇಕು.

ನಂಬಿಕೆ – ______________________________________

ಅವಲಂಬಿಸು – __________________________________

ಅಧಿಕಾರ – _____________________________________

ಆದರ್ಶ – ______________________________________

ಮನದಟ್ಟಾಗು – __________________________________

ಉದ್ಧರಿಸು – ____________________________________

➢ **ಮಾದರಿಯಂತೆ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ, ಅವುಗಳನ್ನು ಹೆಸರಿಸಿ.**

| | ಪದ | ವಿಭಕ್ತಿ ಪ್ರತ್ಯಯ | ವಿಭಕ್ತಿ ಪ್ರತ್ಯಯದ ಹೆಸರು |
|---|---|---|---|
| ಮಾದರಿ | ವಿಜ್ಞಾನಿಗಳಲ್ಲಿ | ಅಲ್ಲಿ | ಸಪ್ತಮೀ |
| | ಹೆಸರನ್ನು | | |
| | ದೇವರ | | |
| | ಅವರಿಗೆ | | |
| | ಮತದಿಂದ | | |
| | ಕಲ್ಪನೆಯ | | |
| | ಬದುಕನ್ನು | | |
| | ಧರ್ಮಕ್ಕೆ | | |

## ಅಭ್ಯಾಸದ ಹಾಳೆ – 02

➢ **ನೀಡಿರುವ ಪದಗಳನ್ನು ದ್ವಿರುಕ್ತಿ ಮತ್ತು ಜೋಡುನುಡಿಗಳಾಗಿ ವಿಂಗಡಿಸಿ.**

ಹೌದೌದು, ಅಕ್ಕಪಕ್ಕ, ಕಟ್ಟಕಡೆ, ಕೆಳಕೆಳಗೆ, ಕಪ್ಪಕಾಣಿಕೆ, ಬೇವುಬೆಲ್ಲ, ತುಟ್ಟತುದಿ, ಹಚ್ಚಹಸಿರು, ಕಾಡುಮೇಡು, ಪಂಡಿತ ಪಾಮರ, ಒಂದೊಂದು, ಹುಳುಹುಪ್ಪಟೆ, ನುಗ್ಗುನುರಿ, ಮೆಲ್ಲಮೆಲ್ಲನೆ, ಕಾಡುನಾಡು, ಅಡ್ಡಾದಿಡ್ಡಿ, ಕೂಲಿನಾಲಿ, ಬನ್ನಿಬನ್ನಿ, ಬಟ್ಟಬಯಲು, ಓದುಬರೆಹ, ಅಂದಚೆಂದ, ಹೊಚ್ಚಹೊಸದು, ಅವಳಿಜವಳಿ.

| | ದ್ವಿರುಕ್ತಿ | ಜೋಡುನುಡಿ |
|---|---|---|
| ಮಾದರಿ | ಕೆಳಕೆಳಗೆ | ಹೌದೌದು |

➢ **ನೀಡಿರುವ ಉದಾಹರಣೆಯ ಪದಗಳನ್ನು ಅವುಗಳಿಗೆ ಸಂಬಂಧಿಸಿದ ಪಟ್ಟಿಗಳಲ್ಲಿ ಬರೆಯಿರಿ.**

ಚೆನ್ನಾಗಿ, ಜುಳುಜುಳು, ಎಲಾ!, ಉಂಟು, ಮತ್ತು, ಇರಲು, ಅಂತೆ, ಅದೇ, ನೆಟ್ಟಗೆ, ತಟ್ಟನೆ, ಪಟಪಟ, ಧಗಧಗ, ಅಯ್ಯೋ!, ಬೇಕು, ಬೇಡ, ಅಥವಾ, ಇರಲಾಗಿ, ಆದ್ದರಿಂದ, ತನಕ, ಇದೇ, ವರೆಗೆ, ಬಿಮ್ಮನೆ, ನಾನೇ, ಸುತ್ತಲೂ, ಬೇಗನೆ, ಢಣಢಣ, ಆಬ್ಬಾ!, ಸಾಕು, ಇಲ್ಲ, ಆಹಾ!, ಹಾಗಾದರೆ.

| ಕ್ರ.ಸಂ. | ಅವ್ಯಯದ ವಿಧಗಳು | ಉದಾಹರಣೆಗಳು |
|---|---|---|
| 1 | ಸಾಮಾನ್ಯ ಅವ್ಯಯ | |
| 2 | ಅನುಕರಣಾ ಅವ್ಯಯ | |
| 3 | ಭಾವಸೂಚಕ ಅವ್ಯಯ | |
| 4 | ಕ್ರಿಯಾರ್ಥಕ ಅವ್ಯಯ | |
| 5 | ಸಂಬಂಧಾರ್ಥಕ ಅವ್ಯಯ | |
| 6 | ಕೃದಂತ ಅವ್ಯಯ | |
| 7 | ತದ್ಧಿತಾಂತ ಅವ್ಯಯ | |
| 8 | ಅವಧಾರಣಾರ್ಥಕ ಅವ್ಯಯ | |

**ತರಗತಿ –9** **ಅಭ್ಯಾಸದ ಹಾಳೆ–3** **ದ್ವಿತೀಯ ಭಾಷೆ ಕನ್ನಡ**

**ಕೃತಿಕಾರರ ಪರಿಚಯವನ್ನು ಹೊಂದಿಸಿ ಬರೆಯಿರಿ.**

| | |
|---|---|
| 1. ಜೇಡರ ದಾಸಿಮಯ್ಯ | –1040 ಯಾದಗಿರಿ ಸಮೀಪದ ಮುದೇನೂರು |
| 2. ಜನನ ಮತ್ತು ಸ್ಥಳ | – ಸಂಕೀರ್ಣ ವಚನ ಸಂಪುಟ –2 |
| 3. ವೃತ್ತಿ ಮತ್ತು ಹೆಂಡತಿಯ ಹೆಸರು | – ರಾಮನಾಥ |
| 4. ಇವರ ಅಂಕಿತ | –ನೇಕಾರ, ದುಗ್ಗಳೆ |
| 5. ಪ್ರಸ್ತುತ ಇವರ ವಚನವನ್ನು ಆರಿಸಿಕೊಂಡಿರುವ ಕೃತಿ | – ಆದ್ಯ ವಚನಕಾರರು ಮೇಲ್ಮಟ್ಟದ ಚಿಂತಕರು ಸರಳ ಶೈಲಿ ಆಡು ಮಾತಿನವರು |

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಜೇಡರ ದಾಸಿಮಯ್ಯನವರು ಯಾವುದನ್ನು ಒಲ್ಲೆ ಎಂದು ಹೇಳಿದ್ದಾರೆ ?

   ______________________________

2. ಬಂಡಿಗೆ ಆಧಾರ ಯಾವುದು ?

   ______________________________

3. ಒಡಲೆಂಬ ಬಂಡಿಗೆ ಕಡೆಗೀಲು ಯಾವುದು ?

   ______________________________

4. ಯಾರ ಭಕ್ತಿಯನ್ನು ನಿಜವೆಂದು ನಂಬಬಾರದು ?

   ______________________________

**ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :**

1. ಭಗವಂತನು ಮಾನವನ ಶರೀರದೊಳಗೆ ಆತ್ಮವನ್ನು ಯಾವರೀತಿ ಬೆರೆಸಿದ್ದಾನೆ ?

   ______________________________

   ______________________________

   ______________________________

2. ಕಡುದರ್ಪವೇರಿದ ಒಡಲು ಎಂದರೇನು ?ಅದನ್ನು ಯಾವುದಕ್ಕೆ ಹೋಲಿಸಲಾಗಿದೆ ?

   ______________________________

   ______________________________

   ______________________________

3. ಜೇಡರ ದಾಸಿಮಯ್ಯ ಯಾವುದನ್ನು ಢಾಂಬಿಕ ಭಕ್ತಿ ಎಂದಿದ್ದಾರೆ ?

   ______________________________

   ______________________________

   ______________________________

**ತರಗತಿ –9** **ಅಭ್ಯಾಸದ ಹಾಳೆ–4** **ದ್ವಿತೀಯ ಭಾಷೆ ಕನ್ನಡ**

**ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

1. ಹಿರಿದು X ________________
2. ಆಧಾರ X ________________
3. ಶಕ್ತ X ________________
4. ಭೇದ X ________________

**ಕೆಳಗೆ ನೀಡಿರುವ ಪದಗಳನ್ನು ನಿಮ್ಮ ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ:**

1. ಒಲ್ಲೆ – ________________________________________
2. ಆಧಾರ – ________________________________________
3. ಬೆರಗಾಗು – ________________________________________
4. ಸೂಳ್ನುಡಿ – ________________________________________

**ಗುಂಪಿಗೆ ಸೇರದ ಪದ ಗುರ್ತಿಸಿ ;**

1. ಕರಿ. ಕರ, ಆನೆ, ಗಜ ____________________
2. ದರ್ಪ, ಸೊಕ್ಕು, ಹಮ್ಮು , ವಿನಯ ____________________
3. ಶರೀರ, ದೇಹ, ಒಡಲು, ಮನಸ್ಸು ____________________
4. ಗಡಣ, ಗಂಟು, ಸಮೂಹ, ಗುಂಪು ____________________

**ಮಾದರಿಯಂತೆ ಬಿಡಿಸಿ ಬರೆಯಿರಿ;**

**ಹಿರಿದು + ಅಪ್ಪ = ಹಿರಿದಪ್ಪ**

1. ____________ + ______________ = ಸಿರಿಯನಿತ್ತಡೆ
2. ____________ + ______________ = ಕಡೆಗೀಲು
3. ____________ + ______________ = ಮಂದಾಗ್ನಿ

**ತತ್ಸಮ ತದ್ಭವಗಳನ್ನು ಬರೆಯಿರಿ.**

1. ಸಿರಿ – ______________
2. ಭಕ್ತ – ______________
3. ಅಗ್ನಿ – ______________
4. ಘಟಕ – ______________

## ಆಚಾರವಿಲ್ಲದ ನಾಲಗೆ – ಅಭ್ಯಾಸದ ಹಾಳೆ – 05

**ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1.ಪುರಂದರ ದಾಸರ ಪೂರ್ವದ ಹೆಸರು ______________________.

2.ಪುರಂದರ ದಾಸರ ಗುರುಗಳ ಹೆಸರು ______________________

3.ಪುರಂದರ ದಾಸರ ಕೀರ್ತನೆಗಳ ಅಂಕಿತ ನಾಮ ______________

4.ದಾಸ ಸಾಹಿತ್ಯ ________________ ರವರಿಂದ ಆರಂಭಗೊಂಡಿತು.

5.ಪುರಂದರ ದಾಸರಿಗೆ ________________ ಎಂಬ ಬಿರುದು ಇದೆ.

6.ಪುರಂದರ ದಾಸರ ಇಷ್ಟ ದೈವ _________________.

7.ಆಚಾರವಿಲ್ಲದ ನಾಲಗೆ ಮಾನವನ ___________ ವರ್ತನೆಗಳನ್ನು ಸೂಚಿಸುತ್ತದೆ.

**ಈ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1.ಪುರಂದರ ದಾಸರು ಹುಸಿ ನುಡಿಯಬಾರದು ಎಂಬುದನ್ನು ಯಾವ ರೀತಿ ಹೇಳಿದ್ದಾರೆ?

______________________________________________________________________________

______________________________________________________________________________

______________________________________________________________________________

______________________________________________

2.ನಾಲಗೆಯ ಬುದ್ಧಿಯು ಹಿಡಿತದಲ್ಲಿರಬೇಕು ಎಂಬುದನ್ನು ಯಾವ ರೀತಿ ಹೇಳಿದ್ದಾರೆ?

______________________________________________________________________________

______________________________________________________________________________

______________________________________________________________________________

______________________________________________

3.ಪುರಂದರದಾಸರು ಪರರ ಚಿಂತೆಯನ್ನು ಬಿಡು ಎಂದು ಏಕೆ ಹೇಳಿದ್ದಾರೆ?

______________________________________________________________________________

______________________________________________________________________________

______________________________________________________________________________

______________________________________________

**ಆಚಾರವಿಲ್ಲದ ನಾಲಗೆ ಅಭ್ಯಾಸದ ಹಾಳೆ – 06**

**ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ.**

1.ಆಚಾರವಿಲ್ಲದ = ________________ + ________________ = ________________

2.ಮಾತನಾಡು = ________________ + ________________ = ________________

3.ನುಡಿಯದೆ = ________________ + ________________ = ________________

4.ಹರಿಯೆಂದು = ________________ + ________________ = ________________

**ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದಿರುವ ಪದಗಳ ವಿಭಕ್ತಿ ಪ್ರತ್ಯಯಗಳ ಹೆಸರನ್ನು ಬರೆಯಿರಿ.**

1.ಪುರಂದರ ದಾಸರು ಹರಿಯನ್ನು ಪ್ರಾರ್ಥಿಸಿದರು. = ________________.

2.ಹಣ್ಣಿಗೆ ಒಂದು ಆಕಾರವಿರುತ್ತದೆ. = ________________

3.ಶಿಕ್ಷಣದಿಂದ ಜ್ಞಾನ ವೃದ್ಧಿಸುತ್ತದೆ. =______________

4.ಉಳುವವನೇ ಭೂಮಿಯ ಒಡೆಯ. = ______________

**ಕೆಳಗಿನ ಪದಗಳಿಗೆ ತತ್ಸಮ– ತತ್ಭವ ರೂಪ ಬರೆಯಿರಿ.**

1. ಅಮೃತ = ___________
2. ಯಮ = ___________
3. ಸಿರಿ = ___________
4. ಚತುರ = ___________